**ಸಾಕ್ಷಿಯನ್ನು ದಿಃ 07-08-2018 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಮುಖ್ಯ ವಿಚಾರಣೆಃ</u> ವಾದಿ ಪರ ಶ್ರೀ. ಎನ್ ವಿ ಕೆ ವಕೀಲರಿಂದಃ**

**ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳನ್ನು ಓದಿ ಹೇಳಿದ್ದು ಅವು ನಿಜ ಇವೆ. ಶಪಥ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ಅದರಲ್ಲಿರುವ ಸಹಿ ನನ್ನದು.**

<u>ಪಾಟೀ ಸವಾಲುಃ</u> ಪ್ರತಿವಾದಿ ಪರ ಶ್ರೀ ಎಮ್ ಎ ಬಿ ವಕೀಲರಿಂದಃ

1. ಪಿ.ಡಬ್ಲ್ಯೂ2 ನನ್ನ ಎರಡನೇ ಅಣ್ಣನ ಮಗ. ಪಿ.ಡಬ್ಲ್ಯೂ2 ನಮ್ಮ ಸಂಬಂಧಿಕರು, ಆದರೆ ನಾವು ಹಾಗೂ ಅವರು ಬೇರೆ ಬೇರೆ ವಾಸ ಇದ್ದೇವೆ. ನಮಗೆ ಕಮತ ಇರುತ್ತದೆ. ಪಿ.ಡಬ್ಲ್ಯೂ2 ರವರಿಗೆ ಕಮತ ಇಲ್ಲ. ನಾನು ಈಗ ಸಾಕ್ಷಿ ಹೇಳಲು ಬಂದಿರುವ ದಾವೆಯಲ್ಲಿಯ ಜಮೀನಿನ ಸರ್ವೆ ನಂಬರು ಹೇಳಲಾಗುವುದಿಲ್ಲ. ನನಗೆ ವಾದಿ ನಂಃ 4 ರವರು ಸಾಕ್ಷಿ ಹೇಳಲು ಕರೆದುಕೊಂಡು ಬಂದಿದ್ದಾರೆ. ವಾದಿಯರ ಪೂರ್ವಜರ ಬಗ್ಗೆ ಗೊತ್ತಿಲ್ಲ. ವಾದಿ ನಂಃ 4 ರವರು ಒಟ್ಟು 5 ಜನ ಸಹೋದರರು ಅದರಲ್ಲಿ ಒಬ್ಬರು ತೀರಿಕೊಂಡಿದ್ದಾರೆ. ಅವರಿಗೆ ಒಬ್ಬ ಸಹೋದರಿ ಇದ್ದಾರೆ.
2. ನಾನು ದಾವಾ ಜಮೀನಿನಲ್ಲಿ 3-4 ವರ್ಷಗಳು ಲಾವಣಿ ಮೇರೆಗೆ ಸಾಗುವಳಿ ಮಾಡಿದ್ದೇನೆ. ಆದರೆ ಯಾವ ವರ್ಷದಲ್ಲಿ ಸಾಗುವಳಿ ಮಾಡಿದ್ದೇನೆ ಎಂದು ಹೇಳಲಾಗುವುದಿಲ್ಲ. ಹುಸೇನಸಾಬ ಬೇಲೇರಿ ರವರು ದಾವಾ ಆಸ್ತಿಯಲ್ಲಿ ವಹಿವಾಟು ಮಾಡುತ್ತಿದ್ದರು. ಈಗ ಹುಸೇನಸಾಬ ಬೇಲೇರಿ ರವರ ಮನೆತನದವರು ದಾವಾ ಆಸ್ತಿಯಲ್ಲಿ ಸುಮಾರು 40 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ ಎನ್ನುವದು ನಿಜ. ಹುಸೇನಸಾಬ ಬೇಲೇರಿ ರವರು ದಾವಾ ಆಸ್ತಿಯನ್ನು ಖರೀದಿಸಿದ ದಿನಾಂಕದಿಂದ ಹಾಗೂ ಭೂನ್ಯಾಯ ಮಂಡಳಿಯ

ಆದೇಶವಾದಾಗಿನಿಂದ ಅವರೇ ದಾವಾ ಆಸ್ತಿಯಲ್ಲಿ ಸಾಗುವಳಿ ಮಾಡುತ್ತಾ ಸ್ವಾಧೀನದಲ್ಲಿ ಇದ್ದಾರೆ, ನಾನು ಎಂದಿಗೂ ದಾವಾ ಆಸ್ತಿಯಲ್ಲಿ ಸಾಗುವಳಿ ಮಾಡಿರಲಿಲ್ಲ ಎನ್ನುವದು ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯರು ನನಗೆ ದಾವಾ ಆಸ್ತಿಯನ್ನು ಬಾಡಿಗೆಗೆ ಕೊಟ್ಟು ಸಾಗುವಳಿ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ವಾದಿಯರು ನನಗೆ ದಾವಾ ಆಸ್ತಿಯನ್ನು ಬಾಡಿಗೆಗೆ ಕೊಟ್ಟು ಸಾಗುವಳಿ ಮಾಡಿಸಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಅದೆ.

ಸಹಿ-07-08-2018

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಗದಗ